ಯಲ್ಲಿ ಮೇಯುತಕ್ಕಂಥ ವಿಳು—ಎಟು ಕೇಜಿ ತೂಕ ಬರತಕ್ಕದ್ದು. ಈ ತಳಿಯನ್ನು ನಮ್ಮ ರೈತರಿಗೆ ಕೊಟ್ಟು ಅಭಿವೃದ್ಧಿ ಪಡಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಸಂಶೋಧನೆ ಕೆಲಸ ಮಾಡುವುದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ. ನಮ್ಮ ಇಲಾಖೆಯಿಂದ ಅಭಿವೃದ್ಧಿ ಪಡಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಅರಣ್ಯದ ಆದಾಯವನ್ನು ಮಂಡಲ ಪಂಚಾಯ್ತಿಗಳಿಗೆ ನೀಡುವುದು.

೬೫೩. ಶ್ರೀ ಐ. ಬಿ. ಶಂಕರ್.—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡಲ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದ ನಂತರ ಅವುಗಳ ಆದಾಯಕ್ಕಿಂತ ಖರ್ಚಿನ ಬಾಬ್ತು ಜಾಸ್ತಿಯಾಗಿದ್ದು ಇದನ್ನು ಸರಿತೂಗಿಸಲು ಪ್ರತಿ ಮಂಡಲಿಗೂ ಅವರ ವ್ಯಾಪ್ತಿಯಲ್ಲಿ ಬರುವ ಅರಣ್ಯ ಇಲಾಖೆಯ ಉತ್ಪತ್ತಿಯಲ್ಲಿ ಒಂದಂಶವನ್ನು ಆಯಾಯಾ ಮಂಡಲಿಗೆ ಕೊಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಭಾಗ ಕೊಡಲು ತೀರ್ಮಾನಿಸಿದೆ ?

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಮಂತ್ರಿಗಳು) —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಐ.ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯವರು ಮಂಡಲ್ ಪಂಚಾಯಿತಿ ವ್ಯಾಪ್ತಿಗೆ ಸೇರಿದಂಥ ಮರಗಳನ್ನು ಸಾಗಿಸಬೇಕಾಗಿ ರಸ್ತೆ ಮತ್ತು ಸೇತುವೆಗಳು ಹಾಳಾಗುವುದಕ್ಕೆ ಬಹಳ ಪಟ್ಟಿಗೆ ಕಾರಣವಾಗುತ್ತದೆ. ಮರಗಳನ್ನು ಕಡಿದು ಸಾಗಿಸುವ ಹೊತ್ತಿಗೆ ಮರಗಳು ಸೇತುವೆಗಳು ಹಾಳಾಗುತ್ತವೆ. ಇದರಿಂದ ನಿಮಗೆ ಉತ್ಪತ್ತಿ ಬರುತ್ತದೆಯೇ ಹೊರತು ಮಂಡಲ ಪಂಚಾಯಿತಿಗಳಿಗೆ ಯಾವುದೇ ತರಹದ ಸಹಾಯ ಅರಣ್ಯ ಇಲಾಖೆಯಿಂದ ಬರುವುದಿಲ್ಲ. ಈ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಈ ಮಂಡಲ ಪಂಚಾಯಿತಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನೀವು ಏನಾ ಲಾಭ ತೆಗೆದುಕೊಳ್ಳುತ್ತೀರಿ ಅದರಲ್ಲಿ ಸ್ವಲ್ಪ ಅಂಶವಾದರೂ ಮಂಡಲ್ ಪಂಚಾಯತ್ ಅಥವಾ ಜಿಲ್ಲಾ ಪರಿಷತ್ತುಗಳಿಗೆ ಕೊಡುವ ಮೂಲಕ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಹತ್ವದ ಸೂಚನೆಯನ್ನು ಕೊಟ್ಟಿದ್ದಾರೆ. ಈಗಾಗಲೇ ವಿಶ್ವ ಬ್ಯಾಂಕ್‌ನ ಅರಣ್ಯ ಯೋಜನೆ ಸರವಿನಿಂದ ಗೋಮಾಳ ಬಂಜರು, ಸಿ ಅಂಡ್ ಡಿ ಕ್ಲಾಸ್ ಅರಣ್ಯಗಳಲ್ಲಿ ಕೆರೆಗಳ ದಂಡೆಗಳಲ್ಲಿ ನೆಡುತೋಪು ಮಾಡುವಂಥ ಸಂದರ್ಭದಲ್ಲಿ ಮಂಡಲ್ ಪಂಚಾಯತಿಯವರು ಮರಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾದರೆ, ಈ ರೀತಿ ಅವರು ಬರೆದುಕೊಟ್ಟರೆ ಅದರಲ್ಲಿ ೫೦ ಪರ್ಸೆಂಟ್‌ನಷ್ಟು ಹಣವನ್ನು ಕೊಡುವಂಥ ವ್ಯವಸ್ಥೆ ಇದೆ.

ಶ್ರೀ ಐ. ಬಿ. ಶಂಕರ್.—ನಾನು ಮಾನ್ಯ ಸಚಿವರಲ್ಲಿ ನಿರ್ದಿಷ್ಟವಾಗಿ ಕೇಳಿದ್ದೆ. ಮರಗಳನ್ನು ಸಾಗಿಸುವ ಹೊತ್ತಿಗೆ ರಸ್ತೆ ಮತ್ತು ಚಿಕ್ಕಚಿಕ್ಕ ಸೇತುವೆಗಳು ಹಾಳಾಗುತ್ತವೆ. ಇವುಗಳನ್ನು ಮೇಂಟೆನ್ ಮಾಡುವುದಕ್ಕೆ ಮಂಡಲ್ ಪಂಚಾಯತಿಗಳಿಗೆ ತೊಂದರೆಯಾಗುತ್ತದೆ. ತಮ್ಮ ಇಲಾಖೆಯಿಂದ ಅವರಿಗೆ ಸಹಕಾರ ಕೊಡುತ್ತೀರಾ ಎಂದು ಮತ್ತೊಮ್ಮೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಅಧ್ಯಕ್ಷರೇ, ಈ ಬಗ್ಗೆ ಯಾವುದೇ ಸೂಚನೆ ಸರ್ಕಾರದ ಮುಂದೆ ಇಲ್ಲ. ಆದರೂ ಮಾನ್ಯ ಸದಸ್ಯರ ಸೂಚನೆಯನ್ನು ನಾನಂ ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಪೆಚ್. ಎಲ್. ತಿಮ್ಮೇಗೌಡ.—ಹಿಂದೆ ಪಂಚಾಯತ್‌ಗಳು ಮತ್ತು ತಾಲ್ಲೂಕು ಬೋರ್ಡುಗಳು ಇದ್ದಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಬರತಕ್ಕಂಥಾದ್ದರ ಕೆಲಭಾಗವನ್ನು ಕೊಡುತ್ತಿದ್ದರು. ಹಿಂದೆ ಸರ್ಕಾರದಿಂದ ಇದು ನಡೆದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಹಿಂದಿನ

ಕಡತಗಳನ್ನು ಪರಿಶೀಲನೆ ಮಾಡಿ ಅದೇರೀತಿ ಈಗಲೂ ಕೊಟ್ಟರೆ ಶ್ರೀ ಶಂಕರ್ ಅವರು ಹೇಳಿದ ಹಾಗೆ ಮಂಡಲ ಪಂಚಾಯತಿಗಳಿಗೆ ಅನುಕೂಲವಾಗುತ್ತದೆ. ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಜಿ. ಎಸ್. ಬಾಗಲ ಕೋಟ್. ಮಾನ್ಯ ಸದಸ್ಯರ ಸೂಚನೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಕಾರ್ಖಾನೆಗಳಿಂದ ಪರಿಸರ ಮಾಲಿನ್ಯ

೮೮೯. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್) —ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ''ಪರಿಸರ ಮಾಲಿನ್ಯ'' ಗೊಳಿಸುತ್ತಿರುವ ಕೈಗಾರಿಕೆಗಳು ಯಾವುವು ?

ಆ) ಪರಿಸರ ಮಾಲಿನ್ಯ ನಿಯಂತ್ರಿಸಲು ರಾಜ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು). —

ಅ) ಸಾಮಾನ್ಯವಾಗಿ ರಾಜ್ಯದ ಎಲ್ಲ ಕೈಗಾರಿಕೆಗಳು ಒಂದಿಲ್ಲೊಂದು ರೀತಿಯಲ್ಲಿ ಪರಿಸರವನ್ನು ಮಲಿನಗೊಳಿಸುತ್ತಿವೆ. ಆದರಲ್ಲೂ ಮುಖ್ಯವಾಗಿ ಸಕ್ಕರೆ, ಡಿಸ್ಟಿಲರೀ, ಕಾಗದ ರಸಾಯನಿಕ ವಸ್ತುಗಳು, ಗೊಬ್ಬರ, ಸಿಮೆಂಟ್, ಡೈರಿ ಮುಂತಾದ ಬೃಹತ್ ಕೈಗಾರಿಕೆಗಳು ಜಲ ಮತ್ತು ವಾಯುವನ್ನು ಮಲಿನಗೊಳಿಸುತ್ತವೆ.

ಆ) ರಾಜ್ಯ ಸರ್ಕಾರವು ರಾಜ್ಯದಲ್ಲಿ ವಾಯು ಮತ್ತು ಜಲ ಮಾಲಿನ್ಯವನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ೧೯೭೪ರಲ್ಲಿ ರಚಿಸಿತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ಉದ್ದಿಮೆಂ ಮತ್ತು ಪುರಸಭೆಗಳಿಂದ ಹೊರಬರುವ ಕಲುಷಿತ ನೀರು ಮತ್ತು ಧೂಷಿತ ವಾಯುವನ್ನು ಜಲ ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೭೪ ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೮೧ರ ಪ್ರಕಾರ ನಿಯಂತ್ರಿಸುತ್ತಿದೆ.

೧೯೮೧ರಲ್ಲಿ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯು ಪರಿಸರ ಸಂರಕ್ಷಣೆ ಕಾರ್ಯಕ್ಕಾಗಿ ಸ್ಥಾಪನೆಯಾಯಿತು. ಈ ಇಲಾಖೆಯು ಹಂತಹಂತವಾಗಿ ಪರಿಸರ ಸಂರಕ್ಷಣೆ ಕಾರ್ಯವನ್ನು ಕೈಗೊಂಡಿದೆ. ರಾಜ್ಯದಲ್ಲಿ ಸ್ಥಾಪನೆಯಾಗುವ ಎಲ್ಲಾ ಕೈಗಾರಿಕೆಗಳಿಂದಾಗಬಹುದಾದ ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿ ತಜ್ಞರನ್ನೊಳಗೊಂಡ ಪರಿಸರ ವಿಮೋಚನೆ ಸಮಿತಿಯು ರಚನೆಯಾಗಿದೆ.

೧೯೮೬ರಲ್ಲಿ ಪರಿಸರ ರಕ್ಷಣೆ ಕಾಯ್ದೆಯು ಜಾರಿಗೆ ಬಂದಿದ್ದು ಈ ಕಾಯ್ದೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಪರಿಸರ ಸಂರಕ್ಷಣೆ ಕಾರ್ಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾದ ಪ್ರಾಯೋಗಿಕ ಕಾರ್ಯಯೋಜನೆಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ. ಪರಿಸರ ಸಂರಕ್ಷಣೆ ಪರಿಸರ ಸಮತೋಲನ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ–ಈ ಕಾರ್ಯಗಳು ಸಂಕೀರ್ಣ ಹಾಗೂ ಸೂಕ್ಷ್ಮ ವಿಷಯಗಳಾಗಿದ್ದು ಈ ಕಾರ್ಯವು ಅದರ ಬಗೆಗಿನ ಕಾಳಜಿ ತಿಳಿವಳಿಕೆಯನ್ನು ಎಲ್ಲರಲ್ಲಿ ಮೂಡಿಸುವುದರಿಂದ ಮಾತ್ರ ಸಾಧ್ಯವಿದೆ. ಸರ್ಕಾರವು ಈ ದಿಶೆಯಲ್ಲಿ ಪ್ರಯತ್ನವನ್ನು ಮಾಡುತ್ತಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಚಾಣಾಕ್ಷತನದಿಂದ, ಒಂದು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೇ ಪ್ರಶ್ನೆಗೆ ಹೇಳುತ್ತಿದ್ದಾರೆ, ಸಂಪೂರ್ಣವಾಗಿ ಎಲ್ಲಾ ಕೈಗಾರಿಕೆಗಳು ಒಂದಲ್ಲ, ಒಂದುರೀತಿಯಿಂದ ಪರಿಸರವನ್ನು ಮಲಿನಗೊಳಿಸುತ್ತಿವೆ ಎಂದು ಹೇಳಿದ್ದಾರೆ. ಆದರೆ ಇದನ್ನು ಯಶಸ್ವಿಯಾಗಿ ತಡೆಗಟ್ಟುವುದರಲ್ಲಿ ಸರ್ಕಾರ ಯಾವ ಕಾರ್ಯಕ್ರಮ ಹಾಕಿದೆ, ಅದನ್ನು ತಿಳಿಸಿಲ್ಲ, ಅದೇರೀತಿ ಯಾವ ಯಾವ ಭಾರಿ ಉದ್ದಿಮೆಗಳು ಇವೆ, ಈ ಉದ್ದಿಮೆಗಳು ಪರಿಸರ ಮಲಿನ ಮಾಡುತ್ತಾ ಬಂದಿವೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮಂಗಳೂರು ರಸಗೊಬ್ಬರ ಕಾರ್ಖಾನೆ ಸೆಕ್ಟಾರ್‌ನಲ್ಲಿ ನಡೆಯುತ್ತಿದೆ. ಈ ಕಾರ್ಖಾನೆ ಬಗ್ಗೆ ಕರ್ನಾಟಕ